(SRI S. BANGARAPPA)

(*b*) if so, the reasons for the same ;

(*c*) whether the Supreme Court has accepted the apology ?

SRI A. R. BADARINARAYANA (Minister for Education).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಬೆಂಗಳೂರಿನ ಜೆ. ಪಿ. ಪಾಲಿಟೆಕ್ನಿಕ್ ಪ್ರಿನ್ಸಿಪಾಲರಾದ ಶ್ರೀ ಆರ್. ಎಸ್. ನಂಜುಂಡಪ್ಪನವರ ಬಡ್ತಿಗೆ ಸಂಬಂಧಿಸಿದ ವಿಷಯದಲ್ಲಿ ಅವರು ಸುಪ್ರೀಂ ಕೋರ್ಟಿಗೆ ಹೋದಾಗ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ತೀರ್ಮಾನವಾಗಿರುವುದು ನಿಜವಲ್ಲವೇ ?

† ಶ್ರೀ ಎ. ಆರ್. ಬದರಿನಾರಾಯಣ್.—ಅವರು ಸುಪ್ರೀಂಕೋರ್ಟಿಗೆ ಹೋಗಿರಬಹುದು. ಅವರಿಗೆ ಏನು ಬೇಕೋ ಅದನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅವರಿಗೆ ಬಡ್ತಿ ಸಿಗತಕ್ಕಂಥ ವಿಷಯದಲ್ಲಿ ಅನ್ಯಾಯವಾಗಿದೆ ಎಂದು ತೀರ್ಪು ಬಂದನಂತರ ಅದನ್ನು ಜಾರಿಗೆ ತರುವುದರಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡಿರುವುದು ಅದು ಕಂಟೆಂಪ್ಟ್ ಆಫ್ ಕೋರ್ಟ್ಸ್, ಅವನ್ನು ಮಾನ್ಯ ಮಾಡದೇ ಇದ್ದುದು ನಿಜವಲ್ಲವೇ ಮತ್ತು ಅದಕ್ಕಾಗಿ ರಾಜ್ಯ ಸರ್ಕಾರದವರು ಕ್ಷಮಾಪಣೆ ಕೇಳಿದ್ದು ನಿಜವಲ್ಲವೇ?

ಶ್ರೀ ಎ. ಆರ್. ಬದರಿನಾರಾಯಣ್.—ಅವರ ಪ್ರಮೋಷನ್‌ಗೂ ತಾವು ಕೇಳಿದ ವಿಷಯಕ್ಕೂ ಸಂಬಂಧ ಇಲ್ಲ. ಅವರಿಗೆ ಪ್ರಮೋಷನ್ ಕೊಡತಕ್ಕಂಥಾ ವಿಚಾರದಲ್ಲಿ ಸರ್ಕಾರ ಅದನ್ನು ಪರಿಶೀಲಿಸುತ್ತಾ ಇದೆ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ—ಈ ಬಗ್ಗೆ ಸುಪ್ರೀಂ ಕೋರ್ಟಿನಿಂದ ತೀರ್ಪು ಬಂದಿದ್ದರೂ ಕೂಡ ಸರ್ಕಾರ ಇಲ್ಲಿಯವರೆಗೂ ಜಾರಿಗೆ ತರದೇ ವಿಳಂಬ ಮಾಡುವುದಕ್ಕೆ ಕಾರಣ ಏನು ?

ಶ್ರೀ ಎ.ಆರ್. ಬದರಿನಾರಾಯಣ್.—ಸುಪ್ರೀಂ ಕೋರ್ಟ್‌ನ ತೀರ್ಮಾನದ ವಿಚಾರವೇ ಬೇರೆ, ನೀವು ಕೇಳತಕ್ಕಂಥ ವಿಚಾರವೇ ಬೇರೆ. ಅವರು ನನಗೆ ಸೀನಿಯಾರಿಟಿ ಬರಬೇಕು ಎಂದು ಕೇಳಿದ್ದಾರೆ. ಅದುದರಿಂದ ಆ ಬಗ್ಗೆ ಏನೂ ತೊಂದರೆ ಇಲ್ಲ, ಅವರಿಗೆ ಏನು ದೊರೆಯಬೇಕೋ ಅವನ್ನು ಕೊಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಜಾರಿಗೆ ಕೊಡುವುದರಲ್ಲಿ ಅನ್ಯಾಯವಾಗಿದೆ ಎಂದು ಕಂಟೆಂಪ್ಟ್ ಆಫ್ ಕೋರ್ಟ್ ಬಗ್ಗೆ, ರಾಜ್ಯ ಸರಕಾರ ಕ್ರಮ ತೆಗೆದುಕೊಳ್ಳುವ ಬಗ್ಗೆ ಈ ಎಲ್ಲ ವಿವರಗಳೂ ಪತ್ರಿಕೆಗಳಲ್ಲಿ ಬಂದಿದ್ದವು, ಅದರಂತೆ ರಾಜ್ಯ ಸರಕಾರ ಕ್ಷಮಾಪಣೆ ಕೇಳಿದ್ದು ನಿಜವೇ ?

ಶ್ರೀ ಎ. ಆರ್. ಬದರೀನಾರಾಯಣ.—ಈ ಸಂದರ್ಭದಲ್ಲಿ ಅಂಥಾದ್ದು ಯಾವುದೂ ಇಲ್ಲ.

Varahi Hydro-Electric Project

561. SRI. A. G. KODGI (Baindur).—

Will the Minister for Public Works and Electricity be pleased to state :—

(*a*) the quantum of energy that would be available to the State by Varahi Hydro Electric Project and the revenue to be derived to the State Exchequer therefrom ;

(*b*) the quantum of water that would be available for irrigation from this project ; the extent of land to be benefited and the employment potentiality ;

(*c*) the probable time of taking up this project and the time within which it will be completed ?

Sri H. M. CHANNABASAPPA (Minister for Public Works and Electricity).—

(*a*) Amount of energy that could be generated is 1,180 Million Kilowatt hours per year and the revenue would be about Rs. 5 crores.

(*b*) (i) A continuous discharge of 1,200 cusecs will be available below the power house which can be used for irrigation, the feasibility of which has to be worked out.

(ii) The project will provide employment to about 10,000 persons during the peak period of its construction.

(*c*) The project will be taken up this year and is expected to be completed by 1979.

ಶ್ರೀ ಕೋಣಂದೂರು ಲಿಂಗಪ್ಪ —ವರಾಹಿ ಯೋಜನೆ ಕೆಳಗಡೆ ಭೂಹೀನರಾಗುವ ರೈತರಿಗೆ ಬೇರೆ ಕಡೆ ಭೂಮಿ ಕೊಡುವ ಬಗ್ಗೆ ಪುನರ್ ವ್ಯವಸ್ಥೆಮಾಡಲು ಯಾವುದಾದರೂ ಒಂದು ಯೋಜನೆ ಸರಕಾರದ ಮುಂದೆ ಇದೆಯೇ ?

† ಶ್ರೀ ಹೆಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಾದ ಶ್ರೀ ಶೀರನಹಳ್ಳಿ ಚಂದ್ರಶೇಖರ್‌ರವರಿ ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದರು. ಆದರ ಎಲ್ಲ ವಿವರಗಳನ್ನೂ ಈಗಾಗಲೇ ಸಭೆಗೆ ಒದಗಿಸಿಕೊಡಲಾಗಿದೆ.

Minor Irrigation Investigation Division

702. Sri B. BYRAPPAJI (Turuvekere).—

Will the Minister for Public Works and Electricity be pleased to state:—

(*a*) whether it is a fact that there was a minor irrigation investigation division with Executive Engineers in each of the S. E. Circles ;

(*b*) if so, the reasons for closing down such division recently ;

(*c*) whether it has come to the notice of the Government that the progress of minor irrigation investigation work has slowed down due to this policy ;

(*d*) if so, whether proper arrangements would be made immediately to re-start these divisions ?